ಕ.ರಾ.ಪ್ರ.ಅ. ನಿಗಮದವರು ನೀಡಿರುವ ಗೌರವ ಅಪ್ಪಣೆ ಚೀಟಿ

389 (823): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):-

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ವಿವಿಧ ವ್ಯವಸ್ಥಿತ ಪ್ರವಾಸಿಗಳಿಗೆ ಗೌರವ ಅಪ್ಪಣೆ ಚೀಟಿ (ಕಾಂಪ್ಲಿಮೆಂಟರಿ ಪಾಸ್)ಗಳನ್ನು ನೀಡುತ್ತಿರುವುದು ವಾಸ್ತವವೆ;

ಆ. ಹಾಗಿದ್ದಲ್ಲಿ ಜನವರಿ 92ರಿಂದ ಡಿಸೆಂಬರ್ 92ರ ಅಂತ್ಯದವರೆಗೆ ಎಷ್ಟು ಗೌರವ ಅಪ್ಪಣೆ ಚೀಟಿ (ಪಾಸ್)ಗಳನ್ನು ನೀಡಲಾಗಿದೆ;

ಇ. ಯಾವ ಸ್ಥಳಗಳಿಗೆ ಈ ಅಪ್ಪಣೆ ಚೀಟಿಗಳನ್ನು ನೀಡಲಾಗಿದೆ;

ಈ. ಯಾರಿಗೆ ಗೌರವ ಅಪ್ಪಣೆ ಚೀಟಿ (ಪಾಸ್)ಗಳನ್ನು ನೀಡಲಾಗಿದೆ ಅವರ ಹೆಸರು ಮತ್ತು ವಿಳಾಸ;

ಉ. ಮೇಲಿನ ಅವಧಿಯಲ್ಲಿ ನೀಡಿದ ಗೌರವ ಅಪ್ಪಣೆ ಚೀಟಿಗಳ ಒಟ್ಟು ಮೊತ್ತವೆಷ್ಟು;

ಊ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಡೆಸುತ್ತಿರುವ ನಿಯೋಜಿತ ಪ್ರವಾಸಗಳಿಗೆ ಗೌರವ ಅಪ್ಪಣೆ ಚೀಟಿ (ಪಾಸ್) ಗಳನ್ನು ನೀಡುತ್ತಿರುವ ಪದ್ಧತಿಯನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):-

ಅ. ಹೌದು.

ಆ. 50

ಇ. ಹೆಚ್ಚಾಗಿ ತಿರುಪತಿ, ಮೈಸೂರು, ಬೇಲೂರು-ಹಳೇಬೀಡು.

ಈ. ವಿವರ ನಿರ್ವಹಿಸಿಲ್ಲ.

ಉ. ಸುಮಾರು ರೂ.10,000-00.

ಊ. ಇಲ್ಲ.

ರಾಜ್ಯದ ಖಜಾನೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

390 (1108): ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):-

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ ರಾಜ್ಯದ ಖಜಾನೆ ಇಲಾಖೆಯಲ್ಲಿ ನೌಕರರ ಸಂಖ್ಯೆಯು ಕೊರತೆಯಿರುವುದರಿಂದ, ಸಾರ್ವಜನಿಕರಿಗೆ ಸಮರ್ಪಕ ಸೇವೆಯು ದೊರೆಯುತ್ತಿಲ್ಲವೆಂಬ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೆ;